**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸ್ಪೆಷಲ್ ಕೇಸ್ ನಂಃ 58/2021 ಪಿ.ಡಬ್ಲ್ಯುಃ 12**

**ಸಿ.ಡಬ್ಲ್ಯುಃ 19**

| | |
|---|---|
| ಸಾಕ್ಷಿದಾರರ ಹೆಸರು | ಎಂ. ಸತ್ಯವತಿ |
| ಗಂಡನ ಹೆಸರು | ವಿ. ಮಂಜುನಾಥ |
| ವಯಸ್ಸು | 59 ವರ್ಷ |
| ಉದ್ಯೋಗ | ಸರ್ಕಾರದ ಉಪಕಾರ್ಯದರ್ಶಿಗಳು, ಕಂದಾಯ ಇಲಾಖೆ |
| ವಿಳಾಸ | ಬೆಂಗಳೂರು |

ದಿನಾಂಕಃ20-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ವಿ.ಸಿ ಮೂಲಕ ದಾಖಲಿಸಿಕೊಳ್ಳಲಾಯಿತು)

**ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ**

1) ನಾನು 2017 ರಿಂದ 2021 ರ ಅಕ್ಟೋಬರ್ ವರೆಗೆ ಸಾರಿಗೆ ಇಲಾಖೆಯಲ್ಲಿ ಅಧೀನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದೆನು.

2) ದಿನಾಂಕ 21-10-2020 ರಂದು ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಉಡುಪಿ ಜಿಲ್ಲೆಯ ಅಪರಾಧ ಕ್ರಮಾಂಕ 3/19 ರ ತನಿಖೆಯ ದಾಖಲಾತಿಗಳನ್ನು ಕಳುಹಿಸಿದ್ದರು. ಅವು ಕ್ರಮ ಸಂಖ್ಯೆ 1 ರಿಂದ 54 ದಾಖಲೆಗಳನ್ನು ಮತ್ತು 12 ಸಾಕ್ಷಿಗಳ ಹೇಳಿಕೆಯನ್ನು ಸಹ ಕಳುಹಿಸಿದ್ದರು. ಅವುಗಳಿಂದ 1 ನೇ ಆರೋಪಿ ಲಂಚದ ಬೇಡಿಕೆ ಇಟ್ಟಿದ್ದರು ಎಂದೂ, ಅದಕ್ಕಾಗಿ ಭ್ರಷ್ಟಾಚಾರ ನಿಗ್ರಹ ದಳದವರು ಬಲೆ ಬೀಸಿ, ಲಂಚ ಪಡೆಯುತ್ತಿದ್ದ 1 ನೇ ಆರೋಪಿ ಅಧಿಕಾರಿಯನ್ನು ಹಿಡಿದಿದ್ದರು ಎಂಬುದನ್ನು ವರದಿ ಮಾಡಿದ್ದರು. ಅದಕ್ಕಾಗಿ 1 ನೇ ಅರೋಪಿ ಅಧಿಕಾರಿಯನ್ನು ಅಭಿಯೋಜನೆಗೆ ಒಳಪಡಿಸಲು ಪರವಾನಿಗೆ ಕೋರಿದ್ದರು. ದಾಖಲೆಗಳನ್ನು ಮತ್ತು ಹೇಳಿಕೆಗಳನ್ನು ಪರಾಂಬರಿಸಿದಾಗ, ಆ.ಸ.ನೌಕರರು ಲಂಚದ

ಬೇಡಿಕೆ ಇಟ್ಟು, ಅದನ್ನು ಪಡೆಯುತ್ತಿದ್ದರು ಎಂದು ಕಂಡುಬಂದಿತ್ತು. ಅದಕ್ಕಾಗಿ ಅವರನ್ನು ಅಭಿಯೋಜನೆಗೆ ಒಳಪಡಿಸಲು ಸಕ್ಷಮ ಪ್ರಾಧಿಕಾರದಿಂದ ಸರಕಾರದ ಪರವಾಗಿ ಅಭಿಯೋಜನಾ ಮಂಜೂರಾತಿಯನ್ನು ನೀಡಿದ್ದೆವು. ಆ.ಸ.ನೌಕರರನ್ನು ಸೇವೆಯಿಂದ ವಜಾಗೊಳಿಸುವ ಅಧಿಕಾರ ಸರಕಾರಕ್ಕೆ ಇದ್ದು, ಸರಕಾರದ ಪರವಾಗಿ ಆದೇಶ ಹೊರಡಿಸುವ ಅಧಿಕಾರ ನನಗೆ ಇದೆ. ಅದಕ್ಕಾಗಿ ಕೊಟ್ಟ ಆದೇಶವನ್ನು ಈಗ ನೋಡಿ ಅದನ್ನು ನಿಶಾನೆ ಪಿ-39 ಎಂದೂ, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-39(ಎ) ಎಂದು ಗುರುತಿಸಿದ್ದೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಬಿ.ಹೆಚ್. ವಕೀಲರಿಂದಃ**

1) ಆ.ಸ.ನೌಕರರು 'ಎ'' ದರ್ಜೆಯ ನೌಕರರಾಗಿದ್ದರು. ನಿಪಿ-39 ರ ಆದೇಶ ಹೊರಡಿಸುವ ಮೊದಲು ದಾಖಲೆಗಳನ್ನು ಪರಿಶೀಲಿಸಿ ನಡವಳಿಕೆಗಳನ್ನು ಸಹ ಮಾಡಿದ್ದೇವೆ. ನನಗೆ ತನಿಖಾಧಿಕಾರಿಗಳು ಒದಗಿಸಿದ ದಾಖಲೆಗಳು ಮತ್ತು ಸಾಕ್ಷಿಗಳ ಹೇಳಿಕೆಯ ಆಧಾರದಿಂದ ನಿಪಿ-39 ರ ವರದಿಯನ್ನು ಮಾಡಿದ್ದೇನೆ. ನಾನು ಆ.ಸ.ನೌಕರರನ್ನಾಗಲೀ, ಯಾವುದೇ ಸಾಕ್ಷಿದಾರರನ್ನಾಗಲೀ, ಅಧಿಕಾರಿಗಳನ್ನಾಗಲೀ, ಕರೆಯಿಸಿ ಯಾವುದೇ ಪ್ರಾಥಮಿಕ ವಿಚಾರಣೆ ಮಾಡಿಲ್ಲ.

2) ಆ.ಸ.ನೌಕರರ ಸೇವಾ ನಿಯಮಾನುಸಾರ ಅವರ ಮೇಲೆ ಯಾವುದೇ ಕ್ರಮ ಜರುಗಿಸುವ ನಿರ್ಧಾರಗಳನ್ನು ಅಧಿಕಾರಿ ಅಥವಾ ಸಚಿವ ತೆಗೆದುಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಆ.ಸ.ನೌಕರರ ಸೇವಾ ಸಂಬಂಧಿತ ನಿರ್ಧಾರಗಳನ್ನು ''ಕ್ಯಾಬಿನೇಟ್'' ಮಾತ್ರವೇ ತೆಗೆದುಕೊಳ್ಳಬೇಕು ಎಂದರೆ ಸರಿಯಲ್ಲ. ಆ.ಸ. ನೌಕರರಿಗೆ ನಿಪಿ-39 ರಲ್ಲಿ ಹೇಳಿದ ಆದೇಶ ಮಾಡುವ ಮೊದಲು, ಶಿಫಾರಸ್ಸು ಆದೇಶದ ಪ್ರತಿಯನ್ನು ಒದಗಿಸಿಲ್ಲ ಎಂದರೆ, ಆ ಆದೇಶವನ್ನು ಒದಗಿಸುವ ಅವಕಾಶ ಇರುವುದಿಲ್ಲ. ನನಗೆ ಅಧೀನ ಕಾರ್ಯದರ್ಶಿಯಾಗಿ ಸಕ್ಷಮ ಪ್ರಾಧಿಕಾರದ ಆದೇಶ ಹೊರಡಿಸುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ ಮತ್ತು ಈ ಆದೇಶಕ್ಕಾಗಿ ಬೇಕಾದ ಕ್ಯಾಬಿನೇಟ್ ನ ನಿರ್ಧಾರವನ್ನು ಪಡೆಯದೇ, ಕೇವಲ ಸಚಿವರ ಅನುಮೋದನೆ ಮೇರೆಗೆ ಹೊರಡಿಸಿದೆ ಎಂದರೆ ಸರಿಯಲ್ಲ. ನಿಪಿ-39 ರ ಆದೇಶವನ್ನು ಸೇವಾ ನಿಯಮಾನುಸಾರ ಪಾಲಿಸ

ಬೇಕಾದ ಕ್ರಮಗಳನ್ನು ಮೀರಿ, ರಾಜ್ಯಪಾಲರ ಅನುಮೋದನೆ ಪಡೆದು ತನಿಖಾಧಿಕಾರಿಗೆ ಅನುಕೂಲ ಮಾಡಿ, ಆ.ಸ.ನೌಕರರಿಗೆ ತೊಂದರೆ ಮಾಡಲು ನಿಪಿ-39 ರ ಆದೇಶ ಹೊರಡಿಸಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್. ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ